**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,ಬೆಂಗಳೂರು ಇವರ ಅರೆನ್ಯಾಯಿಕ ನ್ಯಾಯಾಲಯದಲ್ಲಿ(ಮೇಲ್ಮನವಿ ಪ್ರಾಧಿಕಾರ)**

**ಸಂಖ್ಯೆ:** ಗ್ರಾಅಪ 09 ಗ್ರಾಪಂಸಿ 2022 ದಿನಾಂಕ:03.06.2022

ಶ್ರೀ ಪ್ರೇಮ್ ಸಿಂಗ್ ನಾಯ್ಕ,
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಸೇವೆಯಿಂದ ತೆಗೆದುಹಾಕಲ್ಪಟ್ಟವರು),
ಹರಿಹರಪಲ್ಲತಡ್ಕ ಗ್ರಾಮ ಪಂಚಾಯಿತಿ,
ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. **ಎದುರುದಾರರು**

**ವಿರುದ್ಧ**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, **ಪ್ರತಿವಾದಿಗಳು**
ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ.
ದಕ್ಷಿಣ ಕನ್ನಡ.

**ಪ್ರಸ್ತಾವನೆ:-**

ಶ್ರೀ ಪ್ರೇಮ್ ಸಿಂಗ್ ನಾಯ್ಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಸೇವೆಯಿಂದ ತೆಗೆದುಹಾಕಲ್ಪಟ್ಟವರು), ಹರಿಹರಪಲ್ಲತಡ್ಕ ಗ್ರಾಮ ಪಂಚಾಯಿತಿ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ಪುತ್ತೂರು ತಾಲ್ಲೂಕಿನ ಐತ್ತೂರು ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀ ಸಾಹುಲ್ ಹಮೀದ್ ಎಂಬುವವರ ಹೆಸರಿಗೆ ಜಮೀನನ್ನು ನೋಂದಾಯಿಸಲು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸ್ವೀಕರಿಸುವ ಸಂದರ್ಭದಲ್ಲಿ ದಿನಾಂಕ:03.06.019 ರಂದು ಭ್ರಷ್ಟಾಚಾರ ನಿಗ್ರಹ ದಳದವರಿಂದ ಟ್ರ್ಯಾಪ್‌ಗೆ ಒಳಗಾಗಿರುತ್ತಾರೆ. ಈ ಆರೋಪದ ಕುರಿತು ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಪರಿಶೀಲಿಸಿ, ಮುಖ್ಯ ಕಾರ್ಯನಿರ್ವಹಕಾಧಿಕಾರಿ, ಜಿಲ್ಲಾ ಪಂಚಾಯಿತಿ ಇವರ ಆದೇಶ ಸಂಖ್ಯೆ: ದಕಜಿಪಂ/ಆಡಳಿತ/ಶಿಸ್ತು/ಸಿಆರ್-04/2019-20(ಎ6), ದಿನಾಂಕ:23.11.2020 ರನ್ವಯ ಶ್ರೀ ಪ್ರೇಮ್ ಸಿಂಗ್ ನಾಯ್ಕ್, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಐತ್ತೂರು ಗ್ರಾಮ ಪಂಚಾಯಿತಿ, ಪುತ್ತೂರು ತಾಲ್ಲೂಕು, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರಿಹರಪಲ್ಲತಡ್ಕ ಗ್ರಾಮ ಪಂಚಾಯಿತಿ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ವಿರುದ್ಧ ಹೊರಿಸಿದ ಆರೋಪಗಳು ಸಾಬೀತಾಗಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ & ಮೇಲ್ಮನವಿ)1957ರ ನಿಯಮ 8(vii) ರ ಪ್ರಕಾರ ಸರ್ಕಾರಿ ಸೇವೆಯಿಂದ ತೆಗೆದುಹಾಕುವ ದಂಡನೆಯನ್ನು ವಿಧಿಸಿ, ಆದೇಶಿಸಲಾಗಿದೆ.

..2

ಈ ಆದೇಶವನ್ನು ಪ್ರಶ್ನಿಸಿ ತಾನು ದಿನಾಂಕ:28.12.2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ಇತ್ಯರ್ಥಗೊಳಿಸಲು ನಿರ್ದೇಶನ ನೀಡುವಂತೆ ಮೇಲ್ಮನವಿದಾರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಇಲ್ಲಿ ಅರ್ಜಿ ಸಂಖ್ಯೆ: 3081/2021 ನ್ನು ದಾಖಲಿಸಿರುತ್ತಾರೆ.

ಮಾನ್ಯ ನ್ಯಾಯ ಮಂಡಳಿಯು ಸದರಿ ಪ್ರಕರಣದಲ್ಲಿ ದಿನಾಂಕ:24.11.2021 ರಂದು ಈ ಕೆಳಕಂಡಂತೆ ಆದೇಶ ನೀಡಿರುತ್ತದೆ:-

> "Accordingly, the Application is allowed and the 1st respondent is hereby directed to dispose of the appeal dated:28.12.2020 preferred by the applicant, as early as possible, but not later than three months from the date of receipt of a copy of this order".

ಮುಂದುವರೆದು, ಮಾನ್ಯ ನ್ಯಾಯ ಮಂಡಳಿಯ ಆದೇಶದನ್ವಯ ಮೇಲ್ಮನವಿಯನ್ನು ಇತ್ಯರ್ಥಗೊಳಿಸುವಂತೆ ಎದುರುದಾರರು ದಿನಾಂಕ:21.12.2021 ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ಶ್ರೀ ಪ್ರೇಮ್ ಸಿಂಗ್ ನಾಯ್ಕ್ ಇವರ ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ, ದಿನಾಂಕ:08.04.2022 ರಂದು ಸದರಿ ಪ್ರಕರಣದ ಮೌಖಿಕ ವಿಚಾರಣೆಯನ್ನು ನಿಗದಿಪಡಿಸಿ ವಿಚಾರಣಾ ನೋಟೀಸನ್ನು ಮೇಲ್ಮನವಿದಾರರಿಗೆ ಜಾರಿ ಮಾಡಲಾಗಿದೆ. ದಿನಾಂಕ:08.04.2022 ರಂದು ವಿಚಾರಣೆಗೆ ಎದುರುದಾರರು ಹಾಜರಾಗಿ ತಾನು ಮೇಲ್ಮನವಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಹೊರತುಪಡಿಸಿ, ಹೇಳುವುದು ಏನೂ ಇಲ್ಲ ಎಂಬುದಾಗಿ ಮೌಖಿಕ ವಿವರಣೆಯನ್ನು ಸಲ್ಲಿಸಿರುತ್ತಾರೆ.

ಮೇಲ್ಮನವಿದಾರರ ಮೇಲ್ಮನವಿಯನ್ನು ಪರಿಶೀಲಿಸಲಾಗಿದೆ. ಶ್ರೀ ಪ್ರೇಮಸಿಂಗ್ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಪುತ್ತೂರು ತಾಲ್ಲೂಕು ಐತ್ತೂರು ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀ ಸಾಹುಲ್ ಹಮೀದ್ ಎಂಬುವವರ ಹೆಸರಿಗೆ ಜಮೀನು ನೋಂದಾಯಿಸಲು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸದರಿಯವರಿಂದ ರೂ. 9,000/- ಗಳ ಲಂಚದ ಹಣವನ್ನು ಸ್ವೀಕರಿಸುವ ಸಂದರ್ಭದಲ್ಲಿ ದಿನಾಂಕ 03.06.2019ರಂದು ಭ್ರಷ್ಟಾಚಾರ ನಿಗ್ರಹ ದಳದವರಿಂದ ಟ್ರಾಪ್‌ಗೆ ಒಳಗಾಗಿರುತ್ತಾರೆ. ಈ ಆರೋಪದ ಕುರಿತು ವಿಚಾರಣೆ ನಡೆಸಲು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ ಇವರು ವಿಚಾರಣಾಧಿಕಾರಿಯನ್ನು ನೇಮಕ ಮಾಡಿದ್ದು, ವಿಚಾರಣಾಧಿಕಾರಿಯವರು ಸದರಿ ಪ್ರಕರಣದ ವಿಚಾರಣೆ ನಡೆಸಿ ಆರೋಪಿತ ಸರ್ಕಾರಿ ನೌಕರರ ಲಿಖಿತ ಹೇಳಿಕೆಯನ್ನು ಸ್ವೀಕರಿಸಿರುತ್ತಾರೆ. ಮುಂದುವರೆದು ವಿಚಾರಣಾ ವರದಿಯಲ್ಲಿ ಈ ಕೆಳಕಂಡಂತೆ ಪ್ರಸ್ತಾಪಿಸಿರುತ್ತಾರೆ.

ಎರಡನೇ ಸಾಕ್ಷಿದಾರರು ಹಾಜರು ಪಡಿಸಿದ ಟ್ರಾಪ್ ಪಂಚನಾಮೆ ಹಾಗೂ ಅದರ ಜೊತೆಗಿರುವ ಆರೋಪಿತರು ಹಾಗೂ ಶ್ರೀ ಸಾಹುಲ್ ಹಮೀದ್ ಇವರ ನಡುವೆ ನಡೆದ ಮೊಬೈಲ್ ಸಂಭಾಷಣೆ ದಾಖಲೀಕರಣ ಪರಿಶೀಲಿಸಲಾಯಿತು. ಆರೋಪಿತರು ಎರಡನೇ ಸಾಕ್ಷಿಯವರನ್ನು ಪಾಟೀ ಸವಾಲಿಗೆ

...3

ಒಳಪಡಿಸಿದ ಹೇಳಿಕೆಗಳನ್ನು ಗಮನಿಸಿದಾಗ, ಆರೋಪಿತರು ದೂರುದಾರರಾದ ಶ್ರೀ ಸಾಹುಲ್ ಹಮೀದ್ ಇವರಿಂದ ಹಣ ಸ್ವೀಕರಿಸಿರುವುದು ದೃಢಪಟ್ಟಿರುತ್ತದೆ. ಈ ಬಗ್ಗೆ ಆರೋಪಿತರು ಹೇಳುವ ವಾದ, "ನಾನು ಆರ್ಥಿಕ ಮುಗ್ಗಟ್ಟಿನಿಂದಾಗಿ ದೂರುದಾರರಿಂದ ಹಣ ಸಾಲವಾಗಿ ಪಡೆದೆ" ಎಂಬುದನ್ನು ಒಪ್ಪಲಾಗದು. ಇದು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸೃಷ್ಟಿಸಿದ ಒಂದು ವಾದ ಎಂದು ಪರಿಗಣಿಸಿ ತಿರಸ್ಕರಿಸಲಾಗಿದೆ.

ಭ್ರಷ್ಟಾಚಾರ ನಿಗ್ರಹದಳದ ಅಧಿಕಾರಿಗಳು ಒದಗಿಸಿದ ದಾಖಲೆಗಳು, ನೀಡಿದ ಸಾಕ್ಷಿಗಳನ್ನು, ದೂರುದಾರರು ನೀಡಿದ ಸಾಕ್ಷಿ, ಆರೋಪಿತರು ಹಾಜರುಪಡಿಸಿದ ಲಿಖಿತ ಹೇಳಿಕೆ ಪರಿಶೀಲಿಸಲಾಗಿದೆ. ಈ ಎಲ್ಲಾ ಮಾಹಿತಿಗಳ ಹಿನ್ನೆಲೆಯಲ್ಲಿ, ಆರೋಪಿತರ ವಿರುದ್ಧ ಇಲಾಖೆ ಮಾಡಿರುವ ಆರೋಪವು ಸಾಭೀತಾಗಿರುತ್ತದೆ. ಆರೋಪಿತರು ಸರಕಾರಿ ನೌಕರನಿಗೆ ತರವಲ್ಲದ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಸಾಭೀತಾಗಿರುತ್ತದೆ ಎಂಬುದಾಗಿ ಪ್ರಸ್ತಾಪಿಸಿರುತ್ತಾರೆ.

ಈ ವಿಚಾರಣಾ ವರದಿಯಲ್ಲಿ ಸಾಕ್ಷಿಗಳು ಹಾಗೂ ಹೇಳಿಕೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಿರುವುದು ಕಂಡುಬರುತ್ತಿದ್ದು, ಆರೋಪಿತ ನೌಕರರು ತಮ್ಮ ಮೇಲ್ಮನವಿಯಲ್ಲಿ ಪ್ರಸ್ತಾಪಿಸಿರುವ "ವಿಚಾರಣಾಧಿಕಾರಿಯವರು ಸಾಕ್ಷಿಗಳನ್ನು ಸರಿಯಾಗಿ ಪರಿಶೀಲಿಸಿರುವುದಿಲ್ಲ" ಎಂಬ ಅಂಶವನ್ನು ಒಪ್ಪಲು ಸಾಧ್ಯವಿಲ್ಲ.

ಮುಂದುವರೆದು ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅರೆ ನ್ಯಾಯಿಕ ನ್ಯಾಯಾಲಯದಲ್ಲಿ ದಿನಾಂಕ 08.04.2022 ರಂದು ನಡೆದ ವಿಚಾರಣೆಯಲ್ಲಿ ಎದುರುದಾರರು ಹಾಜರಾಗಿ ಮೇಲ್ಮನವಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಹೊರತುಪಡಿಸಿ ಹೇಳುವುದು ಏನು ಇಲ್ಲಾ ಎಂಬುದಾಗಿ ಮೌಖಿಕ ವಿವರಣೆಯನ್ನು ಸಲ್ಲಿಸಿರುತ್ತಾರೆ. ತನ್ನ ವಿರುದ್ದದ ಆರೋಪಗಳನ್ನು ನಿರಾಕರಿಸುವಂತಹ ಹೇಳಿಕೆಯನ್ನಾಗಲೀ, ಅಥವಾ ಪೂರಕ ದಾಖಲೆಗಳನ್ನಾಗಲೀ ಒದಗಿಸಿರುವುದಿಲ್ಲ. ಅಲ್ಲದೇ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕಡಬ, ದಕ್ಷಿಣ ಕನ್ನಡ ಜಿಲ್ಲೆ ಇವರು ಅರೆನ್ಯಾಯಿಕ ವಿಚಾರಣೆಗೆ ಹಾಜರಾಗಿ ಲಿಖಿತ ವರದಿಯನ್ನು ಸಲ್ಲಿಸಿದ್ದು, ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯವರು ಚಾಲ್ತಿಯಲ್ಲಿರುವ ಕಾನೂನು ಮತ್ತು ನಿಯಮಗಳನ್ವಯ ವಿಚಾರಣೆಯನ್ನು ಜರುಗಿಸಿದ್ದು, ವಿಚಾರಣಾ ವರದಿಯಲ್ಲಿನ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಹಾಗೂ ಆಪಾದಿತ ಸರ್ಕಾರಿ ನೌಕರರ ಸಮಜಾಯಿಷಿಯನ್ನು ಪಡೆದು ಪರಿಶೀಲಿಸಿದ ಬಳಿಕವೇ ದಂಡನಾದೇಶವನ್ನು ಹೊರಡಿಸಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸುವಲ್ಲಿ ಹಾಗೂ ಆರೋಪಗಳನ್ನು ಅಲ್ಲಗಳೆಯುವಂತಹ ಪೂರಕ ದಾಖಲೆಗಳನ್ನಾಗಲೀ ಒದಗಿಸುವಲ್ಲಿ ವಿಫಲರಾಗಿರುತ್ತಾರೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಮೇಲ್ಮನವಿದಾರರಿಗೆ ದಂಡನೆ ವಿಧಿಸಿ, ಹೊರಡಿಸಿರುವ ಆದೇಶ ಸಂಖ್ಯೆ:ದಕಜಿಪಂ/ಆಡಳಿತ/ಶಿಸ್ತು/ಸಿಆರ್-04/2019-20(ಎ6),

...4

ದಿನಾಂಕ:23.11.2020 ಸಮರ್ಪಕವಾಗಿದ್ದು, ಸದರಿ ಆದೇಶವನ್ನು ಎತ್ತಿಹಿಡಿಯಲು ನಿರ್ಣಯಿಸಿ, ಅದರಂತೆ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ ಇವರ ದಂಡನಾದೇಶ ಸಂಖ್ಯೆ: ದಕಜಿಪಂ/ಆಡಳಿತ/ಶಿಸ್ತು/ಸಿಆರ್-04/2019-20(ಎ6), ದಿನಾಂಕ:23.11.2020 ನ್ನು ಎತ್ತಿಹಿಡಿದು ಆದೇಶಿಸಿದೆ.

(ಉಮಾ ಮಹಾದೇವನ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಗೆ:**

1. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ ರಸ್ತೆ, ಬೆಂಗಳೂರು.-09
2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ.
3. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಪುತ್ತೂರು/ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
4. ಶ್ರೀ ಪ್ರೇಮ್ ಸಿಂಗ್ ನಾಯ್ಕ್ ಬಿನ್ ಖುಬ್ಬಾ ನಾಯ್ಕ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಸೇವೆಯಿಂದ ತೆಗೆದುಹಾಕಲ್ಪಟ್ಟವರು), ಹರಿಹರಪಲ್ಲತಡ್ಕ ಗ್ರಾಮ ಪಂಚಾಯಿತಿ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. R/a. C/o :ಲಕ್ಷ್ಮೀ ಮಿನಿ ಕ್ಯಾಂಟೀನ್, ಕೆವಿಜಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಹತ್ತಿರ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ-574327.
5. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ನಿರ್ದೇಶಕರು(ಪಂ.ರಾಜ್-1), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.